**ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಮುಖ್ಯಸ್ಥರು, ಅರಣ್ಯ ಪಡೆ) ಬೆಂಗಳೂರು**
**ಇವರ ಕಚೇರಿ ಆದೇಶದ ಉದ್ದರಣ**

ಕಚೇರಿ ಆದೇಶ ಸಂಖ್ಯೆ: 107/2014-15 ದಿನಾಂಕ: 24-2-2015

ವಿಷಯ: 62 ವಲಯ ಅರಣ್ಯಾಧಿಕಾರಿ ಹುದ್ದೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ಕುರಿತು.

ಉಲ್ಲೇಖ:
1) ಈ ಕಚೇರಿಯ ಅಧಿಸೂಚನೆ ಸಂಖ್ಯೆ: ಬಿ9-ವಅಅ-ವಿವ-1/2012-13 ದಿನಾಂಕ 12-09-2012.
2) ಈ ಕಚೇರಿಯ ಪ್ರಕಟಣೆ ಸಂಖ್ಯೆ: ಬಿ9-ವಅ-ವಿವ-1/2012-13 ದಿನಾಂಕ 14-8-2014.
3) ಈ ಕಚೇರಿಯ ಪ್ರಕಟಣೆ ಸಂಖ್ಯೆ: ಬಿ9-ವಅಅ-ವಿವ-1/2012-13 ದಿನಾಂಕ 01-09-2014.
4) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 26 ಸೇವನೆ 2011 ದಿನಾಂಕ 29-10-2011.
5) ಸರ್ಕಾರದ ಪತ್ರ ಸಂಖ್ಯೆ: ಅಪಜೀ 157 ಅಅಸೇ 2014 ದಿನಾಂಕ 14-10-2014.
6) ಶ್ರೀ ಗುರುರಾಜ ಬಿ. ಸಂಕೇಶ್ವರ ಇವರ ಮನವಿ ದಿನಾಂಕ 12-09-2014.
7) ಶ್ರೀ ನರೇಂದ್ರ ಎ. ಜಿ. ಇವರ ಮನವಿ ದಿನಾಂಕ 16-09-2014.
8) ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಜಾತಿ ಆದಾಯ ಪರಿಶೀಲನಾ ಸಮಿತಿಯ ಅಧ್ಯಕ್ಷರು, ಕೊಡಗು ಜಿಲ್ಲೆ, ಮಡಿಕೇರಿ ಇವರ ಹಿಂಬರಹ ಸಂಖ್ಯೆ: ಬಿಸಿಎಂ-1/ಸಿಂಧುತ್ವ/ಸಿಆರ್-75/2014-15/1418 ದಿನಾಂಕ 21-10-2014
9) ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕೋಡಿ ಇವರ ಪತ್ರ ಸಂಖ್ಯೆ: ಸಿ2(ಆ1)-ಅರಣ್ಯ ಇಲಾಖೆ-ಗ್ರಾಪ್ರಪ/2014-15/4968 ದಿ: 11-12-2014.
10) ಶ್ರೀ ಅಶ್ವತ್ಥಾಮ ಬಿ. ಬಿ., ಚಿತ್ರದುರ್ಗ ಇವರ ಮನವಿ ದಿನಾಂಕ 24-1-2015.

-0-

ಉಲ್ಲೇಖ (1) ರಲ್ಲಿ 62 ವಲಯ ಅರಣ್ಯಾಧಿಕಾರಿ ಹುದ್ದೆಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಲುವಾಗಿ ಅಧಿಸೂಚನೆಯನ್ನು ಹೊರಡಿಸಲಾಗಿತ್ತು. ಉಲ್ಲೇಖ (2)ರ ಈ ಕಚೇರಿಯ ಪ್ರಕಟಣೆಯಲ್ಲಿ 1:2 (ಹುದ್ದೆ:ಅಭ್ಯರ್ಥಿ)ಗಳ ಅಂತಿಮ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಈ ಪಟ್ಟಿಯಲ್ಲಿರುವ ಎಲ್ಲಾ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳ ಪರಿಶೀಲನೆ, ವೈದ್ಯಕೀಯ ಪರೀಕ್ಷೆ, ದೈಹಿಕ ತಾಳ್ವಿಕೆ ಪರೀಕ್ಷೆಗಳನ್ನು ಏರ್ಪಡಿಸಲಾಗಿರುತ್ತದೆ. ಉಲ್ಲೇಖ (3) ರಲ್ಲಿ 61 ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿ ಹಾಗೂ ಕಾಯುವಿಕೆ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ದಿನಾಂಕ 15-09-2014 ರಂದು ಆಯ್ಕೆಯಾದ ಎಲ್ಲಾ ಅಭ್ಯರ್ಥಿಗಳಿಗೆ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಬೇಕೆಂದು ತಿಳಿಸಲಾಯಿತು. ಈ ಪೈಕಿ ಒಟ್ಟು 59 ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಿರುತ್ತಾರೆ.

ಈಗಾಗಲೇ, ಆಯ್ಕೆಯಾದ ಅಭ್ಯರ್ಥಿಗಳ ಪೈಕಿ 34 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಿ, ಉತ್ತರಾಖಂಡ ಫಾರೆಸ್ಟ್ ಟ್ರೈನಿಂಗ್ ಅಕಾಡೆಮಿ, ಹಲ್ದವಾನಿ, ನೈನಿತಾಲ್ ಜಿಲ್ಲೆ, ಉತ್ತರಾಖಂಡ ಇಲ್ಲಿ ವೃತ್ತಿ ತರಬೇತಿ ಪಡೆಯುತ್ತಿದ್ದಾರೆ.

2ನೇ ಕಂತಿನಲ್ಲಿ 22 ಅಭ್ಯರ್ಥಿಗಳಿಗೆ ದಿನಾಂಕ 1-4-2015 ರಿಂದ 18 ತಿಂಗಳ ವೃತ್ತಿ ತರಬೇತಿಯನ್ನು ಆಂಧ್ರಪ್ರದೇಶ ಫಾರೆಸ್ಟ್ ಅಕಾಡೆಮಿ, ಡುಲ್ಲೆಪಲ್ಲಿ, ಹೈದರಾಬಾದ್ ಇಲ್ಲಿ ವೃತ್ತಿ ತರಬೇತಿಯನ್ನು ಪಡೆಯಲಿರುತ್ತಾರೆ.

ಉಲ್ಲೇಖ (1) ರಲ್ಲಿ ನೋಟಿಫೈ ಮಾಡಿರುವ 62 ಹುದ್ದೆಗಳ ಪೈಕಿ ಒಟ್ಟು 56 ಅಭ್ಯರ್ಥಿಗಳು ನೇಮಕಾತಿ ಮಾಡಿದಂತಾಗುತ್ತದೆ. ಬಾಕಿ ಉಳಿದ 6 ಹುದ್ದೆಗಳ ಕುರಿತು ವಿವರ ಈ ಕೆಳಕಂಡಂತಿದೆ:-

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಆಯ್ಕೆಯಾದ ಪ್ರವರ್ಗ | ಅನರ್ಹತೆ ಹೊಂದಲು ಕಾರಣ |
|---|---|---|---|
| 1 | ಶ್ರೀ ಗುರುರಾಜ ಬಿ. ಸಂಕೇಶ್ವರ<br>ನೊಂದಣಿ ಸಂಖ್ಯೆ: 10345<br>ಬಿ.ಎಸ್‌ಸಿ. (ಫಾರೆಸ್ಟ್ರಿ) | GM-General | ಸದರಿ ಅಭ್ಯರ್ಥಿಯು ಉಲ್ಲೇಖ (6)ರ ಪತ್ರದಲ್ಲಿ ಲಿಖಿತ ರೂಪದಲ್ಲಿ ಹುದ್ದೆ ಬೇಡವೆಂದು ತ್ಯಜಿಸಿರುತ್ತಾರೆ ಹಾಗೂ ಯಾವುದೇ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಿರುವುದಿಲ್ಲ. |
| 2 | ಶ್ರೀ ನರೇಂದ್ರ ಎ. ಜಿ.<br>ನೋಂದಣಿ ಸಂಖ್ಯೆ: 12581<br>ಬಿ.ಎಸ್‌ಸಿ. (ಫಾರೆಸ್ಟ್ರಿ) | IIA-Woman-(Lien) | ಸದರಿ ಅಭ್ಯರ್ಥಿಯು ಉಲ್ಲೇಖ (7)ರ ಪತ್ರದಲ್ಲಿ ಲಿಖಿತ ರೂಪದಲ್ಲಿ ಸ್ವಇಚ್ಛೆ ಹಾಗೂ ವೈಯಕ್ತಿಕ ಕಾರಣಗಳಿಂದ ಹುದ್ದೆ ಬೇಡವೆಂದು ತ್ಯಜಿಸಿರುತ್ತಾರೆ ಹಾಗೂ ಯಾವುದೇ ಮೂಲ ದಾಖಲೆಗಳನ್ನು ಇಲಾಖಾ ವಶ ನೀಡಿರುವುದಿಲ್ಲ. |
| 3) | ಕು: ದಿವ್ಯ ಟಿ. ಎನ್.<br>ನೋಂದಣಿ ಸಂಖ್ಯೆ: 13637<br>ಬಿ.ಎಸ್‌ಸಿ. (ಫಾರೆಸ್ಟ್ರಿ) | IIA-Woman | ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಜಾತಿ ಆದಾಯ ಪರಿಶೀಲನಾ ಸಮಿತಿಯ ಅಧ್ಯಕ್ಷರು, ಕೊಡಗು ಜಿಲ್ಲೆ, ಮಡಿಕೇರಿ ಇವರು ಉಲ್ಲೇಖ (8)ರ ಪತ್ರದಲ್ಲಿ ಇವರು 2ಎ ಮೀಸಲಾತಿ ಅಡಿಯಲ್ಲಿ ಆಯ್ಕೆಯಾಗಿದ್ದು, ಇವರು ತೆಗಲ ಬಣಜಿಗ ಜಾತಿಯ ಪ್ರವರ್ಗ 3ಎ ಅಡಿಯಲ್ಲಿ ಬರುವುದರಿಂದ ವಲಯ ಅರಣ್ಯಾಧಿಕಾರಿ ಹುದ್ದೆಗೆ ಆಯ್ಕೆ ಹೊಂದಲು ಅನರ್ಹರಾಗಿರುತ್ತಾರೆಂದು ವರದಿ ನೀಡಿರುತ್ತಾರೆ. ಈ ಅಭ್ಯರ್ಥಿಯು ಇಲಾಖೆಗೆ ನೀಡಿರುವ ಎಲ್ಲಾ ಮೂಲ ದಾಖಲೆಗಳನ್ನು ಈ ಕಚೇರಿಗೆ ಖುದ್ದಾಗಿ ಹಾಜರಾಗಿ ಹಿಂಪಡೆದಿರುತ್ತಾರೆ. |
| 4 | ಶ್ರೀಮತಿ ಲಕ್ಷ್ಮಿ ಎಸ್. ಜಮಖಂಡಿ,<br>ನೋಂದಣಿ ಸಂಖ್ಯೆ: 11788<br>ಬಿ.ಎಸ್‌ಸಿ. (ಫಾರೆಸ್ಟ್ರಿ) | IIIB-Rural | ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕೋಡಿ ಇವರು ಉಲ್ಲೇಖ (9)ರ ಪತ್ರದಲ್ಲಿ ಈ ಅಭ್ಯರ್ಥಿಯ ಗ್ರಾಮೀಣ ಪ್ರಮಾಣ ಪತ್ರಗಳನ್ನು ಪರಿಶೀಲಿಸಲಾಗಿದ್ದು, ಇವರು ದಿನಾಂಕ 1-6-1990 ರಿಂದ 7-6-2000 ರವರೆಗೆ ಪ್ರೋಬ್ಸ್ ಅಕಾಡಮಿ, ಗೋಕಾಕ್ ಇಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ |

| ಕ್ರ. ಸಂ. | ಅಭ್ಯರ್ಥಿಯ ಹೆಸರು | ಆಯ್ಕೆಯಾದ ಪ್ರವರ್ಗ | ಅನರ್ಹತೆ ಹೊಂದಲು ಕಾರಣ |
|---|---|---|---|
| | | | ವಿದ್ಯಾಭ್ಯಾಸ ಮಾಡಿರುತ್ತಾರೆ. ಆದರೆ ಈ ಪ್ರದೇಶವು ದಿನಾಂಕ 22-11-1965 ರಿಂದಲೇ ನಗರ ಪ್ರದೇಶವೆಂದು ಘೋಷಿಸಲಾಗಿರುತ್ತದೆ. ಹೀಗಾಗಿ ಈ ಅಭ್ಯರ್ಥಿಯು ಅನರ್ಹಗೊಂಡಿರುತ್ತಾರೆ. |
| 5 | ಶ್ರೀ ಅಶ್ವತ್ಥಾಮ ಬಿ. ಬಿ.<br>ಚಿತ್ರದುರ್ಗ<br>ನೋಂದಣಿ ಸಂಖ್ಯೆ: 10102<br>ಬಿ.ಎಸ್‌ಸಿ./ಇಂಜಿನಿಯರಿಂಗ್ | GM-Ex-Serviceman | ಸದರಿ ಅಭ್ಯರ್ಥಿಯು ಉಲ್ಲೇಖ (10)ರ ಪತ್ರದಲ್ಲಿ ಲಿಖಿತ ರೂಪದಲ್ಲಿ ವೈಯಕ್ತಿಕ ಕಾರಣಗಳಿಂದ ಹುದ್ದೆ ಬೇಡವೆಂದು ತ್ಯಜಿಸಿರುತ್ತಾರೆ. ಈ ಅಭ್ಯರ್ಥಿಯು ಇಲಾಖೆಗೆ ನೀಡಿರುವ ಎಲ್ಲಾ ಮೂಲ ದಾಖಲೆಗಳನ್ನು ಈ ಕಚೇರಿಗೆ ಖುದ್ದಾಗಿ ಹಾಜರಾಗಿ ಹಿಂಪಡೆದಿರುತ್ತಾರೆ. |

ಈ ಕಚೇರಿಯ ಪತ್ರ ಸಂಖ್ಯೆ: ಬಿ9-ವಅಅ-ವಿವ-1/2012-13 ದಿನಾಂಕ 1-9-2014ರ ಪತ್ರದಲ್ಲಿ ಬಿ.ಎಸ್‌ಸಿ.(ಅರಣ್ಯ ಶಾಸ್ತ್ರ) ಪದವೀಧರರಿಗೆ ಲಭ್ಯವಾಗುವ ಹುದ್ದೆಗಳ ಮೀಸಲಾತಿ ವರ್ಗೀಕರಣದಲ್ಲಿ ಪ್ರವರ್ಗ-I (ಗ್ರಾಮೀಣ) ಮೀಸಲಾತಿಯ 1 ಹುದ್ದೆ ಲಭ್ಯವಿರುತ್ತದೆ. ಆದರೆ ಈ ಪ್ರವರ್ಗದಡಿ ಯಾವ ಅಭ್ಯರ್ಥಿಯೂ ಲಭ್ಯವಿರುವುದಿಲ್ಲ. ಪ್ರವರ್ಗ-I (ಸಾಮಾನ್ಯ) ಮೀಸಲಾತಿಯಡಿಯಲ್ಲಿ ಹಾಗೂ ಸಾಮಾನ್ಯ (ಗ್ರಾಮೀಣ) ಮೀಸಲಾತಿಯಡಿಯಲ್ಲಿ ಅಭ್ಯರ್ಥಿಗಳು ಲಭ್ಯವಿರುತ್ತಾರೆ. ಹೀಗಾಗಿ, ಈ ಒಂದು ಹುದ್ದೆಯನ್ನು ಯಾವ ಪ್ರವರ್ಗದಿಂದ ಭರ್ತಿ ಮಾಡಬೇಕು ಎಂಬುದನ್ನು ಸರ್ಕಾರದಿಂದ ಸ್ಪಷ್ಟೀಕರಣ ಕೋರಲಾಗಿತ್ತು. ಉಲ್ಲೇಖ (5)ರ ಸರ್ಕಾರದ ಪತ್ರದಲ್ಲಿ ಪ್ರವರ್ಗ-I (ಗ್ರಾಮೀಣ) ಅಭ್ಯರ್ಥಿಯು ಲಭ್ಯವಿಲ್ಲದ ಸ್ಥಾನದಲ್ಲಿ ಪ್ರವರ್ಗ-I (ಸಾಮಾನ್ಯ) ಅಭ್ಯರ್ಥಿಯಿಂದ ಭರ್ತಿ ಮಾಡಬೇಕೆಂದು ಆದೇಶವಾಗಿರುತ್ತದೆ.

ಉಲ್ಲೇಖ (4)ರ ಸರ್ಕಾರದ ಅಧಿಸೂಚನೆಯಲ್ಲಿ ಕರ್ತವ್ಯಕ್ಕೆ ಹಾಜರಾಗದ ಕಾರಣ ಭರ್ತಿಯಾಗದೇ ಉಳಿದ ರಿಕ್ತ ಸ್ಥಾನವನ್ನು ಹೆಚ್ಚುವರಿ ಪಟ್ಟಿಯಲ್ಲಿರುವ ಅದೇ ಪ್ರವರ್ಗದ ಅಂದರೆ, ನೇರ ಮತ್ತು ಸಮತಲ ಮೀಸಲಾತಿಗೆ ಸೇರಿದ ಅರ್ಹ ಅಭ್ಯರ್ಥಿಗಳಿಂದ ತುಂಬತಕ್ಕದ್ದು ಎಂದು ಆದೇಶವಿರುತ್ತದೆ. ಹೀಗಾಗಿ ಕು: ದಿವ್ಯ ಟಿ. ಎನ್. ಇವರು 2ಎ-ಮಹಿಳೆ ಪ್ರವರ್ಗದಡಿ ಆಯ್ಕೆಯಾಗಿ ನಂತರ ಅನರ್ಹತೆ ಹೊಂದಿದ್ದರೂ ಇವರ ಸ್ಥಾನಕ್ಕೆ ಅಂದರೆ 2ಎ-ಮಹಿಳೆ ಪ್ರವರ್ಗದಡಿಯಲ್ಲಿ ಮಹಿಳೆ ಅಥವಾ ಪುರುಷ ಅಭ್ಯರ್ಥಿ ಹೆಚ್ಚುವರಿ ಪಟ್ಟಿಯಲ್ಲಿ ಇಲ್ಲದೇ ಇರುವುದರಿಂದ ಈ ಬಗ್ಗೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಸರ್ಕಾರದ ನಿರ್ದೇಶನ ಕೋರಲಾಗಿದೆ.

ಈ ಮೇಲ್ಕಂಡ ಅಂಶಗಳನ್ನು ಕೂಲಂಕಷವಾಗಿ ಪರಿಗಣಿಸಿ, (3) ರಲ್ಲಿ ಪ್ರಕಟಿಸಲಾಗಿರುವ 1:1 (ಹುದ್ದೆ:ಅಭ್ಯರ್ಥಿ) ಗಳ ಅಂತಿಮ ಆಯ್ಕೆ ಪಟ್ಟಿ ಹಾಗೂ ಕಾಯುವಿಕೆ ಪಟ್ಟಿಯನ್ನು ಪರಿಗಣಿಸಿ, ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಮೀಸಲಾತಿ ನಿಯಮಗಳ ಅನ್ವಯ ಹಾಗೂ ಮೆರಿಟ್ ಆಧಾರದ ಮೇರೆಗೆ ಯಾವ ಯಾವ ಪ್ರವರ್ಗದಲ್ಲಿ ಮೇಲೆ ವಿವರಿಸಿರುವ ವಿವಿಧ ಕಾರಣಗಳಿಂದ ತುಂಬಲು ಬಾಕಿ ಇದೆಯೋ ಆ ಹುದ್ದೆಗಳನ್ನು ಅದೇ ಮೀಸಲಾತಿ (ನೇರ ಮತ್ತು ಸಮತಲ ಮೀಸಲಾತಿ) ಅಡಿಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಭರ್ತಿ ಮಾಡಲು ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಆ ದೇ ಶ**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಉಲ್ಲೇಖ (1) ರಲ್ಲಿ ನೋಟಿಫೈ ಮಾಡಿರುವ 62 ವಲಯ ಅರಣ್ಯಾಧಿಕಾರಿ ಹುದ್ದೆಗಳ ಪೈಕಿ ಮೇಲೆ ವಿವರಿಸಿರುವಂತೆ ವಿವಿಧ ಕಾರಣಗಳಿಂದ ತುಂಬಲು ಬಾಕಿ

ಇರುವ 5 ಹುದ್ದೆಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ಎಲ್ಲಾ ಮೀಸಲಾತಿ ನಿಯಮಗಳ ಅನ್ವಯ ಹಾಗೂ ಮೆರಿಟ್ ಆಧಾರದ ಮೇರೆಗೆ ಈ ಕೆಳಕಂಡ ಅಭ್ಯರ್ಥಿಗಳನ್ನು ಈ ಕೆಳಗೆ ವಿಧಿಸಿರುವ ಷರತ್ತಿನ ಮೇರೆಗೆ ಆಯ್ಕೆ ಮಾಡಲಾಗಿದೆ. ವಿವರ ಈ ಕೆಳಕಂಡಂತಿದೆ:-

**B.Sc.(FORESTRY) – 2nd SELECTION LIST.**

| Sl. No. | Register No. | Name of the Candidate Sri/Kum. | Gender | Date of Birth | Category | Rural | Total Marks | Selected Category |
|---|---|---|---|---|---|---|---|---|
| 1 | 12781 | SHARAN BASSAPPA | M | 01-06-1987 | 3B | | 218 | GM-General |
| 2 | 12502 | MANIKHANTHA VAIDYA | M | 24-01-1989 | CAT-1 | | 176 | Cat-I - Rural (Lien) |
| 3 | 10093 | ASHA S. KASAREDDY | F | 17-03-1990 | 3B | Y | 162 | IIIB-Rural |
| 4 | 12447 | KOTRESHA K | M | 22-01-1988 | 2A | Y | 159 | IIA-Woman (Lien) |

**B.Sc./Engineering - 2nd SELECTION LIST.**

| Sl. No. | Register No. | Name of the Candidate Sri/Kum. | Gender | Date of Birth | Category | Rural | Total Marks | Selected Category |
|---|---|---|---|---|---|---|---|---|
| 1 | 12834 | Shreekant M Patil | M | 15-7-1989 | IIIA | Y | 207 | GM-Ex-Service man (Lien) |

<u>ಷರತ್ತುಗಳು:-</u> <u>ವಲಯ ಅರಣ್ಯಾಧಿಕಾರಿ ಹುದ್ದೆಗೆ ಈ ಮೇಲ್ಕಾಣಿಸಿದ ಅಭ್ಯರ್ಥಿಗಳ ಈ ಆಯ್ಕೆಯು ಈ ಕೆಳಗಿನ ಸತ್ಯಾಪನೆಗೆ (Verification) ಗೆ ಒಳಪಟ್ಟಿರುತ್ತದೆ:-</u>

1) ಸಂಬಂಧಪಟ್ಟ ವಿಶ್ವವಿದ್ಯಾಲಯದಿಂದ ಅಭ್ಯರ್ಥಿಗಳ ಪದವಿ ಪ್ರಮಾಣ/ಅಂಕ ಪಟ್ಟಿಯ ಸತ್ಯಾಪನೆ.
2) ಸಂಬಂಧಪಟ್ಟ ಜಿಲ್ಲೆಯ ಜಾತಿ-ಪರಿಶೀಲನಾ ಸಮಿತಿಯಿಂದ ಜಾತಿ ಪ್ರಮಾಣ ಪತ್ರದ ಸತ್ಯಾಪನೆ.
3) ಸಂಬಂಧಪಟ್ಟ ಪರಿಶೀಲನಾ ಸಮಿತಿಯಿಂದ ಗ್ರಾಮೀಣ ಪ್ರಮಾಣ ಪತ್ರದ ಸತ್ಯಾಪನೆ.
4) ಸಂಬಂಧಪಟ್ಟ ಜಿಲ್ಲಾ ಪೊಲೀಸ್ ಅಧೀಕ್ಷಕರಿಂದ ಸಮಾಜಘಾತಕ ಕೃತ್ಯಗಳಲ್ಲಿ ತೊಡಗಿಲ್ಲದೇ ಇರುವ ಬಗ್ಗೆ/ಅಪರಾಧಿಕರಣ ತನಿಖೆಗೆ ಒಳಪಡದೇ ಇರುವ ಬಗ್ಗೆ ಸತ್ಯಾಪನೆ.
5) ಈ ಆದೇಶವು ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಎಲ್ಲಾ ಆದೇಶಗಳಿಗೆ ಒಳಪಟ್ಟಿರುತ್ತದೆ ಮತ್ತು ಮಾನ್ಯ ಕರ್ನಾಟಕ ಆಡಳಿತ ನ್ಯಾಯಮಂಡಳಿಯ ಅರ್ಜಿ ಸಂಖ್ಯೆ: 9130/2014ರ ಅಂತಿಮ ತೀರ್ಮ ಮತ್ತು ನ್ಯಾಯಾಲಯಗಳು ಹೊರಡಿಸುವ ಎಲ್ಲಾ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)
ಹಾಗೂ ಆಯ್ಕೆ ಪ್ರಾಧಿಕಾರ.

ಪ್ರತಿಯನ್ನು:-

1) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು ಇವರಿಗೆ ಮಾಹಿತಿಗಾಗಿ ಗೌರವಗಳೊಂದಿಗೆ ಸಲ್ಲಿಸಿದೆ.

2) ಆಯ್ಕೆ ಹೊಂದಿರುವ ಎಲ್ಲಾ ಅಭ್ಯರ್ಥಿಗಳಿಗೆ ಕಳುಹಿಸುತ್ತಾ ದಿನಾಂಕ 24–2–2015 ರಂದು ಎಲ್ಲಾ ಮೂಲ ದಾಖಲೆಗಳನ್ನು ಈ ಕಚೇರಿಗೆ ಖುದ್ದಾಗಿ ಹಾಜರಾಗಿ ಸಲ್ಲಿಸುವುದು.

3) ಶ್ರೀಮತಿ ಲಕ್ಷ್ಮಿ ಎಸ್. ಜಮಖಂಡಿ, ಕೇರಾಫ್ ಪಿ. ಜಿ. ಉದ್ದಾರ್, ಕುಮಾರ ಇಂಡಸ್ಟ್ರೀಸ್ ಬಳಿ, ಎಕ್ಸ್‌ಟೆನ್‌ಶನ್ ಏರಿಯಾ, ಸರ್ಕಾರಿ ಆಸ್ಪತ್ರೆಯ ಎದುರು, ಗೋಕಾಕ್ ಅಂಚೆ–591307, ಗೋಕಾಕ್ ತಾಲೂಕು, ಬೆಳಗಾವಿ ಜಿಲ್ಲೆ ಇವರಿಗೆ ಕಳುಹಿಸುತ್ತಾ ನೀವು ಸಲ್ಲಿಸಿರುವ ಎಲ್ಲಾ ಮೂಲ ದಾಖಲೆಗಳನ್ನು ಈ ಆದೇಶದೊಂದಿಗೆ ಅಡಕಗೊಳಿಸಿ ಹಿಂದಿರುಗಿಸಲಾಗಿದೆ.

4) ಈ ಕಚೇರಿಯ ಬಿ1 ಶಾಖೆಗೆ ನೀಡಿದೆ.

5) ಕರ್ನಾಟಕ ಅರಣ್ಯ ಇಲಾಖೆಯ ವೆಬ್‌ಸೈಟ್‌ಗೆ.

6) ಕಚೇರಿ ಆದೇಶ ಕಡತಕ್ಕೆ.